**ಸಿ.ಸಿ.ನಂ.: 35/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **02-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ. ಎಮ್.ಜಿ.ಎಸ್. ವಕೀಲರಿಂದ</u>**

1. ಬಂಕಿಕೊಡ್ಲದಿಂದ ಕಾರವಾರ ನೇವಲ್ ಬೇಸ್‌ನ ಅಂಚೆ ಕಛೇರಿಯು ಕನಿಷ್ಟ 60 ಕಿಮೀ ದೂರ ಇದೆ ಎಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿತನಿಗೆ ನಿಪಿ4 ಜ್ಯಾರಿಯಾಗಿಲ್ಲ ಎಂದರೆ ಸರಿಯಲ್ಲ. ನಿಪಿ6 ದಾಖಲಾತಿಯನ್ನು ನಾವು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತನಾಗಲೀ ಆತನ ಸಹೋದರನಾಗಲೀ ನಿಪಿ2 ನ್ನು ನೀಡಲಿಲ್ಲ ಎಂದರೆ ಸರಿಯಲ್ಲ.

2. ನಮ್ಮದು ಹಣಕಾಸಿನ ಸಂಸ್ಥೆ ಎಂದರೆ ಸರಿ. ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಸಾಲದ ಕಾಗದ ಪತ್ರಗಳನ್ನು ನಾವು ಸರಿಯಾಗಿ ಇಟ್ಟಿರುತ್ತೇವೆ. ಈ ಪ್ರಕರಣದ ಸಾಲವು ಆರೋಪಿತನಿಗೆ ಸಂಭಂಧಪಟ್ಟದ್ದು ಅಲ್ಲ ಎಂದರೆ ಸರಿಯಲ್ಲ. ಆರೋಪಿತನು ಈ ಪ್ರಕರಣದ ಸಾಲಕ್ಕೆ ಜ್ಯಾಮೀನುದಾರನಾಗಿರುವುದರಿಂದ ಈ ಪ್ರಕರಣದ ಸಾಲಕ್ಕೆ ಆತನೂ ಸಹ ಬಾಧ್ಯಸ್ಥನಾಗಿರುತ್ತಾನೆ. ಈ ಪ್ರಕರಣದ ಸಾಲಗಾರನ ವಿರುದ್ದ ಪ್ರಕರಣ ಬಾಕಿ ಇರುವಾಗಲೀ ಸದ್ರಿ ಸಾಲಕ್ಕೆ ಸಂಬಂಧಿಸಿದಂತಹ ಜ್ಯಾಮೀನುದಾರರ ವಿರುದ್ಧವೂ ಕೂಡ ನಾವು ಪ್ರಕರಣವನ್ನು ದಾಖಲುಪಡಿಸಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸಾಲಗಾರನ ವಿರುದ್ಧ ಪ್ರಕರಣ ದಾಖಲಿಸಬೇಕಾದರೆ ನಿಪಿ2 ರ ಮೊತ್ತವು ಬೇರೆ ಇತ್ತು ಎಂದು ನುಡಿಯುತ್ತಾರೆ. ಈ ಪ್ರಕಣವನ್ನು ನಾವು ಆ ಪ್ರಕರಣದ ನಿಪಿ2 ರ ವ್ಯತ್ಯಾಸದ ಹಣಕ್ಕೆ ದಾಖಲಿಸದೇ ಸಂಪೂರ್ಣ ಸಾಲಕ್ಕಾಗಿ ದಾಖಲಿಸಿದ್ದೇವೆ ಎಂದರೆ ಎರಡೂ ಸಂದರ್ಭದಲ್ಲಿ ಸಾಲದ ಹಣವು ಬೇರೆ ಬೇರೆ ಆಗಿರುವುದರಿಂದ ಜ್ಯಾಮೀನುದಾರನ ವಿರುದ್ಧ ಇನ್ನೊಂದು ಪ್ರಕರಣ ದಾಖಲಿಸಿರುತ್ತೇವೆ.

3. ನಾವು ದಾಖಲಿಸಿದ ಎರಡೂ ಪ್ರಕರಣಗಳಲ್ಲಿ ಸಾಲದ ಖಾತೆಯ ನಂಬರ 232 ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಎರಡೂ ಸಮಯದಲ್ಲಿ ಸಾಲದ ಮೊತ್ತವು ಬೇರೆ ಬೇರೆ ಆಗಿರುವುದರಿಂದ ಜ್ಯಾಮೀನುದಾರರ ವಿರುದ್ದ. ಈ ಪ್ರಕರಣ ದಾಖಲಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕಣದ ಸಾಲಕ್ಕೆ ಸಂಭಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಇದೇ ಸಾಲಕ್ಕೆ ಸಂಬಂಧಿಸಿದಂತೆ ಇನ್ನೊಂದು ಪ್ರಕರಣವನ್ನು ದಾಖಲು ಮಾಡಿರುವ ಕುರಿತಾಗಿ ನ್ಯಾಯಾಲಯಕ್ಕೆ ಮಾಹಿತಿಯನ್ನು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಈ ಹಿಂದಿನ ಪ್ರಕರಣ ಹಾಗೂ ಈ ಪ್ರಕರಣವು ಒಂದೇ ರೀತಿಯ ಪ್ರಕರಣ ಎಂದರೆ ಸರಿ.

4. ಸಾಲಗಾರರು ಹಾಗೂ ಜ್ಯಾಮೀನುದಾರರ ವಿರುದ್ಧ ಈಗಾಗಲೇ ಪಂಚಾಯತ್ ದಾವಾ ನಡೆಯುತ್ತಿದೆ. ಈ ಪ್ರಕರಣದ ಮುಖ್ಯ ಸಾಲಗಾರನಾದ ಗಣೇಶ ಜಟ್ಟಿ ಹನೇಹಳ್ಳಿ ಇತನ ವಿರುದ್ದ ಈಗಾಗಲೇ ಒಂದು ಪ್ರಕರಣ {C.C.No.235/2023} ದಾಖಲಾಗಿರುವುದರಿಂದ ಪ್ರದ್ರಿ ಪ್ರಕರಣದಲ್ಲಿ ಆರೋಪಿತನು ಮೋಸಪಡಿಸುವ ಉದ್ದೇಶದಿಂದ ಬೋಗಸ್ಸ ಚೆಕ್ಕನ್ನು ನೀಡಿದ್ದಾನೆ ಎಂದು ಆರೋಪ ಇರುವುದರಿಂದ ಆತನು ಬೇರೆಯವರ ಚೆಕ್ಕನ್ನು ನಮ್ಮ ಬ್ಯಾಂಕಿಗೆ ಬಂದು ನೀಡಿದಾಗ ನಮಗೆ ಚೆಕ್ ಬೇಡ ಎಂದು ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಈ ಪ್ರಕರಣದ ಆರೋಪಿಯು ಸಾಲಗಾರನ ಒಡಹುಟ್ಟಿದ ಸಹೋದರನಾಗಿರುವುದರಿಂದ ಆತನು ನೀಡಿದ ಚೆಕ್ಕನ್ನು ಪಡೆದುಕೊಂಡಿರುತ್ತೇವೆ. ಆರೋಪಿತನು ಸಾಲಗಾರನ ಒಡ ಹುಟ್ಟಿದ ಅಣ್ಣ ಎಂದು ತೋರಿಸಲು ಯಾವುದೇ ವಂಶಾವಳಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಈ ಪ್ರಕರಣದ ಸಾಲವು ವಯಕ್ತಿಕ ಸಾಲ ಆಗಿರುವುದರಿಂದ ಅಂತಹ ದಾಖಲಾತಿಯನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

5. ನಿಪಿ7 ರಲ್ಲಿ ಅರ್ಜಿದಾರ ಹಾಗೂ ಈ ಪ್ರಕರಣದ ಆರೋಪಿತನು ಒಡ ಹುಟ್ಟಿದವರು ಎಂಬ ಬಗ್ಗೆ ಉಲ್ಲೇಖ ಇರುವುದಿಲ್ಲ, ಸಾಲ ನೀಡಿದೆ ಎನ್ನಲಾದ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯ ಗೋಕರ್ಣ ಶಾಖೆಯಲ್ಲಿ ಶಾಖಾ ವ್ಯವಸ್ಥಾಪನಾಗಿರುವುದಿಲ್ಲ. ನಿಪಿ 2 ರಲ್ಲಿ ನಮೂದಿಸಿದ ಮೊತ್ತದ ಹಣವು ಕಾನೂನು ಬದ್ದವಾಗಿ ಮರು ಪಾವತಿ ಮಾಡುವ ಹಣ ಇಲ್ಲ ಎಂದರೆ ಸರಿಯಲ್ಲ. ನಾವು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೂ ಕೂಡ ಸುಳ್ಳು ಸಾಕ್ಷಿ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ನ್ನು ಆರೋಪಿತನ ಸಹೋದರನು ನಮಗೆ ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ 2 ರ ಮೇಲೆ ಇರುವ ಸಹಿಯು ಆರೋಪಿತನದ್ದು ಅಲ್ಲ ಎಂದರೆ ಸರಿಯಲ್ಲ. ನಾವು ವಿನಾಕಾರಣ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನಿಗೆ ನೋಟೀಸ ಜ್ಯಾರಿಯಾಗದೇ ಇರುವುದರಿಂದ ಆರೋಪಿತನಿಗೆ ಉತ್ತರವನ್ನು ನೀಡಲು ಆಗಲಿಲ್ಲ ಎಂದರೆ ಸರಿಯಲ್ಲ.

6. ನಾನು ಈ ದಿನ ಸಾಕ್ಷಿ ನುಡಿಯುವವರೊ ಆರೋಪಿತನ ವಿಳಾಸವು ನೆವಲ ಬೆಸ್‌ನಲ್ಲಿ ಇದೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದ್ರಿ ದಾಖಲಾತಿಯನ್ನು ಸಂಪಾದಿಸುವ ಪ್ರಯತ್ನವೂ ಸಹ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿತನ ವಿಳಾಸವನ್ನು ಪತ್ತೆ ಹಚ್ಚುವ ಪ್ರಯತ್ನವನ್ನು ಮಾಡಿರುವ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆರೋಪಿತನು ಬ್ಯಾಂಕಿಗೆ ಬಂದು ಮೌಖಿಕವಾಗಿ ತಿಳಿಸಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿತನು ಮೌಖಿಕವಾಗಿ ಬಂದು ವಿಳಾಸವನ್ನು ತಿಳಿಸಿದ್ದಾಗ್ಯೂ ಸಹ ಆತನ ಸರಿಯಾದ ವಿಳಾಸಕ್ಕೆ ನೋಟೀಸನ್ನು ಕಳುಹಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾವೇ ನೋಟೀಸನ್ನು ಕಳುಹಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ4 ನ್ನು

ಹೊರತುಪಡಿಸಿ ಚೆಕ್ ಅಮಾನ್ಯವಾದ ಕುರಿತಾಗಿ ಬೇರೆ ಬೇಡಿಕೆಯ ನೋಟೀಸನ್ನು ಕಳುಹಿಸಿದ ಕುರಿತಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ4 ರಲ್ಲಿ ಆರೋಪಿತನ ವಿಳಾಸವು ಹಳೇಹಳ್ಳಿಯಲ್ಲಿ ಇದೆ ಎಂದರೆ ಸರಿ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆ.ಪ್ರ.ದ.ನ್ಯಾ.ದಂ. ಕುಮಟಾ